# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521

**ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.**

ದೂರವಾಣಿ ಸಂಖ್ಯೆ : 080-22212343

ಅಂತರ್ಜಾಲ : https://kptcl.karnataka.gov.in
ಇ–ಮೇಲ್ ವಿಳಾಸ : director.ahr.kptcl@gmail.com

**ವಿಷಯ:** ವಿಜಯಪುರ 110 ಕೆ.ವಿ. ಉಪಕೇಂದ್ರದ ಆವರಣದಲ್ಲಿ ಶಿಥಿಲಾವಸ್ಥೆಯಲ್ಲಿರುವ ಹೆಸ್ಕಾಂನ ವಿಭಾಗೀಯ ಕಚೇರಿ ಕಟ್ಟಡವನ್ನು ಕೆಡವಿ ನೂತನ ಕಚೇರಿ ಕಟ್ಟಡವನ್ನು ನಿರ್ಮಿಸಲು ಕವಿಪ್ರನಿನಿ ಜಾಗವನ್ನು ಲೀಸ್ ಆಧಾರದ ಮೇಲೆ ನೀಡುವ ಬಗ್ಗೆ.

**ಉಲ್ಲೇಖ:**
1. ಕವಿಪ್ರನಿನಿ/ಬಿ9/4948/04-05 ದಿನಾಂಕ 29/04/2005.
2. ಕವಿಪ್ರನಿನಿ/ಬಿ9/4948/04-05 ದಿನಾಂಕ 26/10/2006.
3. ನಿರ್ದೇಶಕರು (ತಾಂತ್ರಿಕ), ಹೆಸ್ಕಾಂ ರವರ ಪತ್ರ ಸಂಖ್ಯೆ: ಸಿ.ವೈ.ಎಸ್-83 ದಿನಾಂಕ 15/12/2022.
4. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಬಾಗಲಕೋಟೆ ರವರ ಪತ್ರ ಸಂಖ್ಯೆ: 20739-41 ದಿನಾಂಕ 22/12/2022.
5. ಕವಿಪ್ರನಿನಿ/ಪ್ರವ್ಯ(ತಾ)/ಸಿವಿಲ್(ಬಿ9)/1/2023 ವ್ಯಸ್ಥಿ (ಇ-44296) ದಿನಾಂಕ 04/01/2023.
6. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಬಾಗಲಕೋಟೆ ರವರ ಪತ್ರ ಸಂಖ್ಯೆ: 24859-61 ದಿನಾಂಕ 04/02/2023.
7. ದಿನಾಂಕ 06/03/2023 ರಂದು ನಡೆದ 138 ನೇ ಕವಿಪ್ರನಿನಿ ಮಂಡಳಿ ನಿರ್ದೇಶಕರುಗಳ ಸಭೆ ನಡವಳಿಗಳು.
8. ದಿನಾಂಕ 19/07/2023 ರಂದು ನಡೆದ 140 ನೇ ಕವಿಪ್ರನಿನಿ ಮಂಡಳಿ ನಿರ್ದೇಶಕರುಗಳ ಸಭೆ ನಡವಳಿಗಳು.
9. ನಿಗಮ ಕಾರ್ಯಾಲಯದ ಟಿಪ್ಪಣಿ ದಿನಾಂಕ 23/08/2023

**ಪೀಠಿಕೆ:**

1. ವಿಜಯಪುರ 110 ಕೆ.ವಿ. ಉಪಕೇಂದ್ರ ಆವರಣದ ಒಟ್ಟು ಜಮೀನು 20 ಎಕರೆ 2 ಗುಂಟೆ (ಖರಾಬು ಸೇರಿ) ಕವಿಪ್ರನಿನಿ ಒಡೆತನದಲ್ಲಿರುತ್ತದೆ. ಸದರಿ ಆವರಣದಲ್ಲಿ 110 ಕೆ.ವಿ. ಉಪಕೇಂದ್ರ, ಕಚೇರಿ ಕಟ್ಟಡ, ಉಗ್ರಾಣ, ವಸತಿ ಗೃಹಗಳು, ಅತಿಥಿ ಗೃಹ, ನೌಕರರ ಸಂಘದ ಸಮುದಾಯ ಭವನ, ಇಂಜಿನಿಯರುಗಳ ಸಂಘದ ಕಟ್ಟಡ ಇತ್ಯಾದಿಗಳನ್ನು ನಿರ್ಮಿಸಲಾಗಿದೆ. ಹೆಸ್ಕಾಂನ ವಿಭಾಗೀಯ ಕಚೇರಿ ಕವಿಪ್ರನಿನಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಸದರಿ ಕಟ್ಟಡವನ್ನು 1973 ರಲ್ಲಿ ರೂ.1,85,000/- ಗಳ ಮೂಲ ವೆಚ್ಚದಲ್ಲಿ ನಿರ್ಮಿಸಲಾಗಿದ್ದು, ಪ್ರಸ್ತುತ ಸದರಿ ಕಟ್ಟಡ ಶಿಥಿಲಾವಸ್ಥೆಯಲ್ಲಿರುತ್ತದೆ. ನಿರ್ದೇಶಕರು (ತಾಂತ್ರಿಕ) ಹೆಸ್ಕಾಂ ರವರು ಶಿಥಿಲಗೊಂಡಿರುವ ವಿಭಾಗೀಯ ಕಚೇರಿ ಕಟ್ಟಡವನ್ನು ನೆಲಸಮಗೊಳಿಸಿ ಸದರಿ ಜಾಗವನ್ನು ಸೇರಿದಂತೆ 60 ಮೀ X 56 ಮೀ ಜಾಗವನ್ನು ನೂತನ ವಿಭಾಗೀಯ ಕಚೇರಿ ಕಟ್ಟಡ ನಿರ್ಮಿಸಲು ಲೀಸ್ ಆಧಾರದ ಮೇಲೆ ನೀಡಲು ಕೋರಿರುತ್ತಾರೆ. ಈ ಸಂಬಂಧ, ಮಾನ್ಯ ಶಾಸಕರು, ವಿಜಯಪುರ, ನಗರ ಮತಕ್ಷೇತ್ರ ರವರು ಸಹ ನೂತನ ವಿಭಾಗೀಯ ಕಚೇರಿ ಕಟ್ಟಡ ನಿರ್ಮಿಸಲು ಕವಿಪ್ರನಿನಿ ಜಾಗವನ್ನು ಲೀಸ್ ಆಧಾರದ ಮೇಲೆ ಹೆಸ್ಕಾಂಗೆ ನೀಡುವಂತೆ ಕೋರಿರುತ್ತಾರೆ.

2. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಬಾಗಲಕೋಟೆ ರವರು ಸದರಿ ಆವರಣದಲ್ಲಿ ಹಾಲಿ ಶಿಥಿಲಾವಸ್ಥೆಯಲ್ಲಿರುವ ವಿಭಾಗೀಯ ಕಚೇರಿ ಕಟ್ಟಡವನ್ನು ಕೆಡವಿ ಹೆಸ್ಕಾಂನ ನೂತನ ವಿಭಾಗೀಯ ಕಚೇರಿ ಕಟ್ಟಡ ನಿರ್ಮಾಣಕ್ಕೆ 60 ಮೀ X 56 ಮೀ ಅಳತೆಯ ಜಾಗವನ್ನು ಹೆಸ್ಕಾಂ ಗೆ ಲೀಸ್ ಆಧಾರದ ಮೇಲೆ ನೀಡವಂತೆ ಉಲ್ಲೇಖ (4) ಮತ್ತು (6) ರ ಪತ್ರಗಳಲ್ಲಿ ಕೋರಿರುತ್ತಾರೆ.

3. ಕವಿಪ್ರನಿನಿ ಯ ಒಡೆತನದಲ್ಲಿದ್ದ ಒಟ್ಟಾರೆ ಆಸ್ತಿಯನ್ನು ಪ್ರಸರಣ ಆಸ್ತಿ ಹಾಗೂ ವಿತರಣಾ ಆಸ್ತಿಗಳೆಂದು ವರ್ಗೀಕರಿಸಿದ ನಂತರ, ಎಸ್ಕಾಂ ಗಳಿಗೆ ಅವಶ್ಯವಿರುವ ಕವಿಪ್ರನಿನಿ ಜಾಗವನ್ನು ಹಾಗೂ ಕವಿಪ್ರನಿನಿ ಗೆ ಅವಶ್ಯವಿರುವ ಎಸ್ಕಾಂ ಗಳ ಜಾಗಗಳನ್ನು ಲೀಸ್ ಆಧಾರದ ಮೇಲೆ ನೀಡುವ ಬಗ್ಗೆ ಉಲ್ಲೇಖ (1) ರ ಕವಿಪ್ರನಿನಿ ಆದೇಶದಲ್ಲಿ Arms-length arrangement ನ್ನು ಅನುಮೋದಿಸಲಾಗಿದೆ.

4. ವಿಜಯಪುರ ಟಿ.ಎಲ್ & ಎಸ್.ಎಸ್ ವಿಭಾಗ ವ್ಯಾಪ್ತಿಯಲ್ಲಿ ಜನವರಿ-2023 ರವರೆಗೆ ಹೆಸ್ಕಾಂ ನಿಂದ ಪಾವತಿಸಬೇಕಾದ ಬಾಕಿ ಬಾಡಿಗೆ ಹಾಗೂ ನಿರ್ವಹಣೆ ವೆಚ್ಚ ರೂ.335.95 ಲಕ್ಷಗಳಾಗಿರುತ್ತದೆ. ಸದರಿ ಮೊತ್ತವನ್ನು ಹೆಸ್ಕಾಂ ನಿಂದ ಪಾವತಿಸಲಾಗಿರುವುದನ್ನು ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಬಾಗಲಕೋಟೆ ರವರು ದೃಢೀಕರಿಸಿಕೊಂಡ ನಂತರ ಪ್ರಸ್ತಾಪಿಸಿರುವ ಜಾಗವನ್ನು ಹೆಸ್ಕಾಂಗೆ ಹಸ್ತಾಂತರಿಸುವುದು.

5. ವಿಜಯಪುರ 110 ಕೆ.ವಿ. ಉಪಕೇಂದ್ರದ ಆವರಣದಲ್ಲಿ ಹಾಲಿ ಶಿಥಿಲಾವಸ್ಥೆಯಲ್ಲಿರುವ ಹೆಸ್ಕಾಂ ನ ವಿಭಾಗೀಯ ಕಚೇರಿ ಕಟ್ಟಡವನ್ನು ತೆರವುಗೊಳಿಸಿ ಸದರಿ ಜಾಗವನ್ನೊಳಗೊಂಡಂತೆ 60 ಮೀ X 56 ಮೀ ಅಳತೆಯ ಜಾಗವನ್ನು ನೂತನ ಕಚೇರಿ ಕಟ್ಟಡ ನಿರ್ಮಿಸಲು ಕವಿಪ್ರನಿನಿ ಮತ್ತು ಎಸ್ಕಾಂ ಗಳ ನಡುವೆ ಚಾಲ್ತಿಯಲ್ಲಿರುವ Arms-length arrangement ರನ್ವಯ, ಹೆಸ್ಕಾಂ ಗೆ 30 ವರ್ಷಗಳ ಅವಧಿಗೆ ಲೀಸ್ ಆಧಾರದ ಮೇಲೆ ನೀಡುವ ಹಾಗೂ ಹಾಲಿ ಶಿಥಿಲಾವಸ್ಥೆಯಲ್ಲಿರುವ ವಿಭಾಗೀಯ ಕಚೇರಿ ಕಟ್ಟಡವನ್ನು "as is where is basis" ಆಧಾರದಲ್ಲಿ ಹೆಸ್ಕಾಂ ವತಿಯಿಂದಲೇ ತೆರವುಗೊಳಿಸುವ ಪ್ರಸ್ತಾವನೆಯನ್ನು, ಅನುಮೋದನೆಗಾಗಿ ಮಂಡಳಿಯ ಸಭೆಯ ಮುಂದೆ ಮಂಡಿಸಲಾಗಿತ್ತು.

6. ಸದರಿ ಪ್ರಸ್ತಾವನೆಯನ್ನು ದಿನಾಂಕ 06/03/2023 ರಂದು ನಡೆದ 138 ನೇ ಕವಿಪ್ರನಿನಿ ಮಂಡಳಿ ನಿರ್ದೇಶಕರುಗಳ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.

*"**RESOLVED THAT** approval be and is hereby accorded to spare identified KPTCL land measuring 60 Mtrs X 56 Mtrs at the premises of 110kV substation, KPTCL at Vijayapura to HESCOM lease basis for a period of 30 years as per the prevailing Arms-length arrangement between KPTCL and ESCOMs, for construction of their Division office building duly dismantling existing deteriorated building subject to ascertaining that HESCOM has cleared all the outstanding dues towards rental charges, maintenance charges, water supply charges and lease amount in the jurisdiction of TL & SS Division, Vijayapura.*

***FURTHER RESOLVED THAT** Director (Admin & HR), KPTCL be and is hereby authorized to issued necessary orders accordingly"*

ಈ ಹಿನ್ನೆಲೆಯಲ್ಲಿ, ಕೆಳಕಂಡಂತೆ ಆದೇಶಿಸಲಾಗಿದೆ.

**ಕವಿಪ್ರನಿನಿ ಆದೇಶ ಸಂಖ್ಯೆ: ಕವಿಪ್ರನಿನಿ/ಪ್ರವ್ಯ(ತಾ)/ಸಿವಿಲ್(ಬಿ9)/1/2023 ವ್ಯಸ್ಥಿ (ಇ-44296) ದಿನಾಂಕ** 01 SEP 2023

ದಿನಾಂಕ 06/03/2023 ರ 138 ನೇ ಕವಿಪ್ರನಿನಿ ಮಂಡಳಿ ನಿರ್ದೇಶಕರ ಸಭೆಯ ನಡವಳಿಯನ್ವಯ ಹಾಗೂ ದಿನಾಂಕ 19/07/2023 ರ 140 ನೇ ಕವಿಪ್ರನಿನಿ ಮಂಡಳಿ ನಿರ್ದೇಶಕರ ಸಭೆಯ ನಿರ್ಣಯದಂತೆ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರು ನಿಗಮ ಕಾರ್ಯಾಲಯದ ದಿನಾಂಕ 23/08/2023 ರ ಟಿಪ್ಪಣಿಯಲ್ಲಿ ಅನುಮೋದಿಸಿರುವ ಹಿನ್ನೆಲೆಯಲ್ಲಿ, ಸದರಿ ಜಾಗವನ್ನು ಹೆಸ್ಕಾಂ ಗೆ ಈ ಕೆಳಕಂಡ ಷರತ್ತುಗಳನ್ವಯ ಲೀಸ್ ಆಧಾರದ ಮೇಲೆ ನೀಡಲು ಕೂಡಲೆ ಅಗತ್ಯ ಕ್ರಮಕೈಗೊಳ್ಳುವಂತೆ ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಬಾಗಲಕೋಟೆ ರವರಿಗೆ ನಿರ್ದೇಶನ ನೀಡಲಾಗಿದೆ.

1. ವಿಜಯಪುರ 110 ಕೆ.ವಿ. ಉಪಕೇಂದ್ರದ ಆವರಣದಲ್ಲಿ ಹಾಲಿ ಶಿಥಿಲಾವಸ್ಥೆಯಲ್ಲಿರುವ ಹೆಸ್ಕಾಂ ನ ವಿಭಾಗೀಯ ಕಚೇರಿ ಕಟ್ಟಡವನ್ನು ತೆರವುಗೊಳಿಸಿ ಸದರಿ ಜಾಗವನ್ನೊಳಗೊಂಡಂತೆ 60 ಮೀ X 56 ಮೀ ಅಳತೆಯ ಜಾಗವನ್ನು ನೂತನ ಕಚೇರಿ ಕಟ್ಟಡ ನಿರ್ಮಿಸಲು 30 ವರ್ಷಗಳ ಲೀಸ್ ಆಧಾರದ ಮೇಲೆ ಹೆಸ್ಕಾಂ ಗೆ ಹಂಚಿಕೆ ಮಾಡುವುದು.

2. ಸದರಿ ಜಾಗದಲ್ಲಿ ಹಾಲಿ ಇರುವ ನಿಗಮದ ವಿಭಾಗೀಯ ಕಚೇರಿ ಕಟ್ಟಡವನ್ನು ಹೆಸ್ಕಾಂ ನ ವತಿಯಿಂದಲೇ 'as is where is basis' ನಂತೆ ತೆರವುಗೊಳಿಸಲು ಹಾಗೂ ಸದರಿ ಕಟ್ಟಡವನ್ನು ತೆರವುಗೊಳಿಸುವ ಟೆಂಡರ್ ಪ್ರಕ್ರಿಯೆಯಲ್ಲಿ ಗುತ್ತಿಗೆದಾರರು ಹೆಸ್ಕಾಂ ಗೆ ಪಾವತಿಸುವಂತಹ ಮೊತ್ತ ಇದ್ದಲ್ಲಿ, ಸದರಿ ಮೊತ್ತವನ್ನು ಕವಿಪ್ರನಿನಿ ಲೆಕ್ಕಕ್ಕೆ ಜಮಾ ಮಾಡುವಂತೆ ಹೆಸ್ಕಾಂ ಗೆ ತಿಳಿಸುವುದು.

3. ವಿಜಯಪುರ ಟಿ.ಎಲ್ & ಎಸ್.ಎಸ್ ವಿಭಾಗ ವ್ಯಾಪ್ತಿಯಲ್ಲಿ ಜನವರಿ-2023 ರವರೆಗೆ ಹೆಸ್ಕಾಂ ನಿಂದ ಪಾವತಿಸಬೇಕಾದ ಬಾಕಿ ಬಾಡಿಗೆ ಹಾಗೂ ನಿರ್ವಹಣೆ ವೆಚ್ಚ ರೂ.335.95 ಲಕ್ಷಗಳಾಗಿರುತ್ತದೆ. ಸದರಿ ಮೊತ್ತವನ್ನು ಹೆಸ್ಕಾಂ ನಿಂದ ಪಾವತಿಸಲಾಗಿರುವುದನ್ನು ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಬಾಗಲಕೋಟೆ ರವರು ದೃಢೀಕರಿಸಿಕೊಂಡ ನಂತರ ಪ್ರಸ್ತಾಪಿಸಿರುವ ಜಾಗವನ್ನು ಹೆಸ್ಕಾಂಗೆ ಹಸ್ತಾಂತರಿಸುವುದು.

4. ಸದರಿ ಜಾಗವನ್ನು ಹೆಸ್ಕಾಂ ಗೆ ನೀಡುವ ಸಂಬಂಧ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಟಿಎಲ್ ಮತ್ತು ಎಸ್‌ಎಸ್ ವಿಭಾಗ, ವಿಜಯಪುರ ರವರು ಹೆಸ್ಕಾಂನೊಂದಿಗೆ ಲೀಸ್ ಒಪ್ಪಂದ ಮಾಡಿಕೊಳ್ಳುವುದು.

5. ಸದರಿ ಜಾಗದ ಹಾಲಿ ಮಾರ್ಗಸೂಚಿ ಬೆಲೆಯನ್ವಯ ಹಾಗೂ ಕವಿಪ್ರನಿನಿ ಮತ್ತು ಎಸ್ಕಾಂ ಗಳ ನಡುವೆ ಹಾಲಿ ಇರುವ Arms-length arrangement ನ ನಿಯಮಗಳಂತೆ, ವಾರ್ಷಿಕ ಲೀಸ್ ಮೊತ್ತವನ್ನು ಲೆಕ್ಕಾಚಾರ ಮಾಡಿ ಪಾವತಿಸುವಂತೆ, ಹೆಸ್ಕಾಂ ಗೆ ಸೂಚಿಸುವುದು.

6. ಸದರಿ ಲೀಸ್ ಮೊತ್ತವನ್ನು ಪ್ರತಿ 5 ವರ್ಷಗಳಿಗೊಮ್ಮೆ, ಅಂದಿನ ಮಾರ್ಗಸೂಚಿ ಬೆಲೆಯನ್ವಯ ಹಾಗೂ Arms-length arrangement ನ ನಿಯಮಗಳನ್ವಯ, ಪರಿಷ್ಕರಿಸುವುದು. ಹಾಗೂ ವಾರ್ಷಿಕ ಲೀಸ್ ಮೊತ್ತವನ್ನು, ಪ್ರತಿ ವರ್ಷ ಏಪ್ರಿಲ್ ಮಾಹೆಯ ಮೊದಲ ವಾರದಲ್ಲಿ, ಮುಂಗಡವಾಗಿ ವಿಜಯಪುರ, ಟಿಎಲ್ ಮತ್ತು ಎಸ್‌ಎಸ್ ವಿಭಾಗಕ್ಕೆ ಪಾವತಿಸುವಂತೆ ಹೆಸ್ಕಾಂ ಗೆ ಸೂಚಿಸುವುದು.

7. ಹೆಸ್ಕಾಂ ಗೆ ನೀಡಲು ಅನುಮೋದಿಸಿರುವ ಜಾಗವನ್ನು, ಉದ್ದೇಶಿತ ಕಟ್ಟಡ ನಿರ್ಮಾಣಕ್ಕೆ ಮಾತ್ರ ಉಪಯೋಗಿಸುವಂತೆ ಹಾಗೂ ಬೇರೆ ಯಾವುದೆ ಉದ್ದೇಶಕ್ಕೆ ಬಳಸಬಾರದೆಂಬ, ಷರತ್ತನ್ನು ವಿಧಿಸುವುದು.

8. ಹೆಸ್ಕಾಂ ಗೆ ನೀಡಲು ಅನುಮೋದಿಸಿರುವ ಜಾಗದ ಕರಾರು ಒಪ್ಪಂದ ಮಾಡಿಕೊಂಡ ದಿನದಿಂದ, ಒಂದು ವರ್ಷದ ಅವಧಿಯೊಳಗೆ, ಉದ್ದೇಶಿತ ಕಟ್ಟಡ ನಿರ್ಮಾಣಕ್ಕೆ ಕ್ರಮಕೈಗೊಳ್ಳುವಂತೆ ತಿಳಿಸುವುದು, ಇಲ್ಲವಾದ್ದಲ್ಲಿ, ಒಪ್ಪಂದದ ಕರಾರು ರದ್ದಾಗುವುದೆಂಬ ಷರತ್ತನ್ನು ವಿಧಿಸುವುದು.

9. ನಿಗಮ ಲೀಸ್ ನೀಡಲು ಅನುಮೋದಿಸಿರುವ ಜಾಗ ಒತ್ತುವರಿಯಾಗದಂತೆ ಸಂರಕ್ಷಿಸಿಕೊಳ್ಳಲು ಸೂಕ್ತ ಕ್ರಮಕೈಗೊಳ್ಳಲು ಹೆಸ್ಕಾಂ ಗೆ ಸೂಚಿಸುವುದು.

10. ಲೀಸ್ ಆಧಾರದ ಮೇಲೆ ಹೆಸ್ಕಾಂ ಗೆ ನೀಡಲು ಅನುಮೋದಿಸಿರುವ ಜಾಗದ ಬಗ್ಗೆ, ಟಿಎಲ್ ಮತ್ತು ಎಸ್‌ಎಸ್ ವಿಭಾಗದ ಆಸ್ತಿ ಪುಸ್ತಕದಲ್ಲಿ, ಅಗತ್ಯ ದಾಖಲಾತಿಗಳನ್ನು ಮಾಡುವುದು.

11. ಹೆಸ್ಕಾಂ ಗೆ ನೀಡಲು ಅನುಮೋದಿಸಿರುವ ಜಾಗದ ಬಗ್ಗೆ ನಿಗಮದ ದಿನಾಂಕ 29/04/2005 ರ ಆದೇಶ ಹಾಗೂ 26/10/2006 ಸುತ್ತೋಲೆಯಲ್ಲಿ ತಿಳಿಸಿರುವ Arms-length arrangement ನ ನಿಯಮಗಳನ್ವಯ ಮುಂದಿನ ಅಗತ್ಯ ಕ್ರಮಕೈಗೊಳ್ಳುವುದು.

**"ಆದೇಶದ ಮೇರೆಗೆ"**

**ನಿರ್ದೇಶಕರು (ಆ ಮತ್ತು ಮಾ.ಸಂ)**
**ಕವಿಪ್ರನಿನಿ, ಬೆಂಗಳೂರು.**

**ಪ್ರತಿಗಳು:-**

1. ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ, ಹುಬ್ಬಳ್ಳಿ.
2. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಕವಿಪ್ರನಿನಿ, ಬಾಗಲಕೋಟೆ.
3. ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ) / (ಆಂತರಿಕ ಪರಿಶೋಧನೆ), ಕವಿಪ್ರನಿನಿ.
4. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
5. ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ಕಾ ಮತ್ತು ನಿ) ವೃತ್ತ, ಕವಿಪ್ರನಿನಿ, ಬಾಗಲಕೋಟೆ.
6. ಅಧೀಕ್ಷಕ ಇಂಜಿನಿಯರ್ (ಸಿವಿಲ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
7. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ) - ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು.
8. ಲೆಕ್ಕ ನಿಯಂತ್ರಣಾಧಿಕಾರಿ, ಪ್ರಸರಣ ವಲಯ, ಕವಿಪ್ರನಿನಿ, ಬಾಗಲಕೋಟೆ.
9. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಟಿ.ಎಲ್ ಮತ್ತು ಎಸ್.ಎಸ್ ವಿಭಾಗ, ಕವಿಪ್ರನಿನಿ, ವಿಜಯಪುರ.
10. ಕಾರ್ಯನಿರ್ವಾಹಕ ಇಂಜಿನಿಯರ್ (ಸಿವಿಲ್), ಪ್ರಸರಣ ವಲಯ, ಕವಿಪ್ರನಿನಿ, ಬಾಗಲಕೋಟೆ.
11. ಉಪಲೆಕ್ಕ ನಿಯಂತ್ರಣಾಧಿಕಾರಿ (ಆಂತರಿಕ ಪರಿಶೋಧನೆ), ಪ್ರಸರಣ ವಲಯ, ಕವಿಪ್ರನಿನಿ, ಬಾಗಲಕೋಟೆ.
12. ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಆ ಮತ್ತು ಮಾ. ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
13. ಲೆಕ್ಕಾಧಿಕಾರಿ (ಕೋಡಿಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.